# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)

## ವಾರ್ಡ್‌ಸಮಿತಿ ಸಭೆ, ದಿನಾಂಕ: 03-09-2022ರ

## ಸಭಾ ನಡುವಳಿ

**ದಿನಾಂಕ: 03-09-2022ರಂದು ಮಧ್ಯಾಹ್ನ 02.00** ಗಂಟೆಗೆ ವಾರ್ಡ್ ನಂ.07 ಥಣಿಸಂದ್ರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ **ಶ್ರೀ ನಾಗಪ್ಪ ಕಮತಿ ಸಹಾಯಕ ಕಾರ್ಯಪಾಲಕ ಅಭಿಯಂತರರು** ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿ.ಬಿ.ಎಂ.ಪಿ ಸಮುದಾಯ ಭವನದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು.

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ನಾಗಪ್ಪ ಕಮತಿ | ನೋಡಲ್ ಅಧಿಕಾರಿಗಳು, ವಾರ್ಡ್ ನಂ 07(ಥಣಿಸಂದ್ರ) ಹಾಗೂ ಸ.ಕಾ.ಅ ಬಿ.ಬಿ.ಎಂ.ಪಿ |
| 2 | ಶ್ರೀ ಸುರೇಶ ದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ 07(ಥಣಿಸಂದ್ರ) |
| 3 | ಶ್ರೀಮತಿ ಡಾ॥ ಅಲೀನಾ ಜನ್ನತ | ಆರೋಗ್ಯ ವೈಧ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಥಣಿಸಂದ್ರ |
| 4 | ಶ್ರೀ ಸೋಮಶೇಖರ್ | ವ್ಯವಸ್ಥಾಪಕರು, ಸ.ಕಾ.ಅ, ಬ್ಯಾ.ಉ.ವಿ |
| 6 | ಶ್ರೀ ನಂಜುಂಡಪ್ಪ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 07 (ಥಣಿಸಂದ್ರ) |
| 7 | ಶ್ರೀಮತಿ ಕಾಂತಾಮಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 07(ಥಣಿಸಂದ್ರ) |
| 8 | ಶ್ರೀ ಬಸವರಾಜಪ್ಪ | ನೀರಿನ ನಿರೀಕ್ಷಕರು, ಬಿ ಡಬ್ಲ್ಯೂ ಎಸ್ ಎಸ್ ಬಿ (ನಿರ್ವಹಣೆ) |
| 9 | ಶ್ರೀ ಶರಣ್ ಸಲ್ಗೊರ್ | ಬಿ ಡಬ್ಲ್ಯೂ ಎಸ್ ಎಸ್ ಬಿ, ಸೂಪರವೈಸರ್ ಕಾವೇರಿ ನೀರು |

**ಶ್ರೀ ಸುರೇಶ ದೇವತರಾಜ್** ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ಮಾತನಾಡಿ ಸರ್ಕಾರದಿಂದ ಬಿ.ಬಿ.ಎಂ.ಪಿ ಗೆ ಹೊಸದಾಗಿ 243 ವಾರ್ಡ್‌ಗಳನ್ನು ರಚನೆ ಮಾಡಲಾಗಿದ್ದು, ಅದರಂತೆ ಈ ವಾರ್ಡ್ ಸಂಖ್ಯೆಯು 07(ಥಣಿಸಂದ್ರ)ಗಳಾಗಿರುತ್ತದೆ ಎಂದು ತಿಳಿಸಿದರು ಮತ್ತು ಮಾನ್ಯ **ವಲಯ ಆಯುಕ್ತರು,** ಯಲಹಂಕ ವಲಯ ರವರು ಹೊಸದಾಗಿ ರಚನೆಯಾಗಿರುವ ಯಲಹಂಕ ವಲಯ ವ್ಯಾಪ್ತಿಯಲ್ಲಿ ಬರುವ ವಾರ್ಡ್‌ಗಳಿಗೆ ನೋಡಲ್ ಅಧಿಕಾರಿಗಳನ್ನು ದಿನಾಂಕ 02-09-2022 ರಂದು ನೇಮಿಸಿದ್ದು, ಪ್ರಥಮ ವಾರ್ಡ್ ಸಮಿತಿಯ ಸಭೆಗಳನ್ನು ದಿನಾಂಕ 03-09-2022 ರಂದು ನಡೆಸಲು ನಿರ್ದೇಶನ ನೀಡಿದ್ದು, ಅದರಂತೆ ಇಂದು ದಿನಾಂಕ 03-09-2022 ರಂದು **ಮಧ್ಯಾಹ್ನ 02.00 ಗಂಟೆಗೆ** ವಾರ್ಡ್ ಸಮಿತಿಯ ಸಭೆಯನ್ನು ಕರೆಯಲಾಗಿದೆ ಎಂದು ಸಭೆಗೆ ತಿಳಿಸಿದರು. ವಾರ್ಡ್ ಸಮಿತಿಗೆ ಹೊಸದಾಗಿ ನೇಮಿಸಲಾಗಿರುವ ನೋಡಲ್ ಅಧಿಕಾರಿ ಹಾಗೂ ಸ.ಕಾ.ಅ ಬ್ಯಾಟರಾಯನಪುರ ಉಪ ವಿಭಾಗ **ಶ್ರೀ ನಾಗಪ್ಪ ಕಮತಿ** ರವರಿಗೆ ಹಾಗೂ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ, ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಹಿಂದಿನ ಸಭೆಯಲ್ಲಿ ಚರ್ಚಿಸಿಲಾಗಿರುವ ವಿಷಯಗಳ ಬಗ್ಗೆ:** ಪ್ರಥಮವಾಗಿ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ವಿವರವನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಿಳಿಸಿದರು.
2. **ಕೋವಿಡ್ -19 ಸೊಂಕು ಹರಡವುದನ್ನು ತಡೆಗಟ್ಟುವ ಬಗ್ಗೆ :**
   - Covid ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಹಾಕಬೇಕು ಎಂದು ಆರೋಗ್ಯ ವೈದ್ಯಾದಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಹೆಗಡೆನಗರ ರವರು ತಿಳಿಸಿದರು

ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಬಹಳಷ್ಟು ಸಾರ್ವಜನಿಕರು Booster Dose ತೆಗದುಕೊಳ್ಳುವುದು ಬಾಕಿವಿದ್ದು, ಸಾರ್ವಜನಿಕರು ಶೀಘ್ರವಾಗಿ Booster Dose ಲಸಿಕೆ ಪಡೆದುಕೊಳ್ಳುವಂತೆ ಸಭೆಗೆ ತಿಳಿಸಿದರು.

- **ಅಝುರ್ ಭರತ್ ನಗರ** ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪೋಲಿಯೋ ಲಸಿಕೆ ಯಾವ ಸಮಯದಲ್ಲಿ ಹಾಕಲಾಗುತ್ತಿದೆ ಎಂಬ ಮಾಹಿತಿಯನ್ನು ಸಾರ್ವಜನಿಕರಿಗೆ ಸ್ಪಷ್ಟವಾಗಿ ತಿಳಿಸಬೇಕಾಗಿ ಕೋರಿದರು. ಈ ಸಂಬಂದ ನೋಡಲ್ ಅಧಿಕಾರಿಗಳು ಮಾತನಾಡಿ ಆರೋಗ್ಯ ವೈದ್ಯಾದಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಹೆಗಡೆನಗರ ರವರು ನಾಮಫಲಕದಲ್ಲಿ ಪೋಲಿಯೋ ಲಸಿಕೆ ಬಗ್ಗೆ ಸ್ಪಷ್ಟವಾಗಿ ಸಾರ್ವಜನಿಕರಿಗೆ ಮಾಹಿತಿ ಒದಗಿಸಬೇಕಾಗಿ ಸೂಚಿಸಿದರು.
- **ಶಕೀಲ್ ಸಾದಿಕ್ ಲೆಔಟ್** ರವರು ವಾರ್ಡ್ ವ್ಯಾಪ್ತಿಯಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸಿದ್ದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಆರೋಗ್ಯ ವೈದ್ಯಾದಿಕಾರಿಗಳು, ಸಾರ್ವಜನಕರಿಗೆ ಅನುಕೂಲವಾಗುವಂತೆ ಆರೋಗ್ಯ ಶಿಬಿರವನ್ನು ಆಯೋಜಿಸಲು ಹಾಗೂ ಸಾರ್ವಜನಿಕರಿಗೆ ಮುಂಚಿತವಾಗಿ ಆರೋಗ್ಯ ಶಿಬಿರಗಳ ಬಗ್ಗೆ ಮಾಹತಿ ನೀಡಬೇಕಾಗಿ ಸೂಚಿಸಿದರು.

3. **ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ :**

- **ಶಕೀಲ್ ಸಾದಿಕ್ ಲೆಔಟ್** ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಸಮರ್ಪಕವಾಗಿ ಆಗುತ್ತಿಲ್ಲವೆಂದು ತಿಳಿಸಿ ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಕೋರಿದರು.
- **ಶ್ರೀ ದಾಸಪ್ಪ ಹೆಗಡೆನಗರ** ರವರು ವಾರ್ಡ್ ವಾಪ್ತಿಯಲ್ಲಿ ಕಸದ ವಾಹನ ಪ್ರತಿದಿನ ಮನೆಗಳಿಗೆ ತ್ಯಾಜ್ಯವನ್ನು ಸಂಗ್ರಹಿಸಲು ಬರುತ್ತಿಲ್ಲವೆಂದು ಹಾಗು 2 ರಿಂದ 3 ದಿನಕ್ಕೆ ಒಮ್ಮೆ ಬರುತ್ತಿರುವದರಿಂದ ಸಾರ್ವಜನಿಕರು ರಸ್ತೆಗಳಲ್ಲಿ ಕಸವನ್ನು ಸುರಿಯುತ್ತಿರುವುದಾಗಿ ತಿಳಸಿದರು ಮತ್ತು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಪ್ರತಿ ದಿನ ಯಾವ ಯಾವ ಆಟೋಟಿಪ್ಪರ ಎಷ್ಟು ರಸ್ತೆಗಳಿಗೆ ಘನತ್ಯಾಜ್ಯ ಸಂಗ್ರಹಿಸಲಾಗುತ್ತಿದ್ದಾರೆ ಎಂಬ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು, ಪರಿಶೀಲನೆ ಮಾಡಲು ಹಾಗೂ ಮುಂದಿನ ಸಭೆಗೆ ಮಾಹಿತಿ ಒದಗಿಸಲು ಸೂಚಿಸಿದರು.
- **ಸುರೇಶ್ ಥಣಿಸಂದ್ರ** ರವರು ಮಾತನಾಡಿ ನೂರ ಮಸೀದಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವೀಪರ್ಸ್‌ಗಳು ಬಾರದೆ ಇರುವ ಕಾರಣ ಘನತ್ಯಾಜ್ಯ ರಸ್ತೆಗಳಲ್ಲಿ ಹೆಚ್ಚಾಗುತ್ತಿದ್ದು ಕಿರಿಯ ಆರೋಗ್ಯ ಪರಿವೀಕ್ಷಕರು, ಕೂಡಲೇ ಸ್ವೀಪರ್ಸ್‌ಗಳನ್ನು ಕಳುಹಿಸಲು ಹಾಗೂ ರಸ್ತೆಗಳನ್ನು ಸ್ವಚ್ಛಗೊಳಿಸಲು ಕ್ರಮ ವಹಿಸಬೇಕಾಗಿ ಕೋರಿದರು.

4. **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿಗೆ ಸಂಬಂದಿಸಿದ ವಿಷಯಗಳ ಬಗ್ಗೆ :**

- **ಶಕೀಲ್ ಸಾದಿಕ್ ಲೇಔಟ್** ರವರು ಮಾತನಾಡಿ ಅಂಜನಾದ್ರಿ ಲೇಔಟ್‌ನ ಹಳ್ಳಿದ ಮಸೀದಿ ಮತ್ತು ಸ್ವಿಚ್ ಫಾಕ್ಟ್ರಿ ಹತ್ತಿರ ಕೊಳವೆ ಬಾವಿಗಳು ಕೊರಯಾಲಾಗಿದ್ದು, ಪಂಪುಮೋಟಾರ್ ಸಹ ಅಳವಡಿಸಿದ್ದು, ಪೈಪ್‌ಲೈನ್ ಕಾಮಗಾರಿ ಬಾಕಿವಿರುತ್ತದೆ ಎಂದು ತಿಳಿಸಿದರು.
- **ಥಣಿಸಂದ್ರ ಸರ್ಕಾರಿ ಶಾಲೆ ಹಿಂಭಾಗದ ರಸ್ತೆಯಲ್ಲಿ** ಹೊಸ ಕೊಳವೆಬಾವಿ ಕೊರಯಾಲಾಗಿದ್ದು, ಪಂಪುಮೋಟಾರ್ ಸಹ ಅಳವಡಿಸಿದ್ದು ಆದರೆ ಆನ್ ಮಾಡಲಾಗಿರುವುದಿಲ್ಲ ಆದ್ದರಿಂದ ಶೀಘ್ರವಾಗಿ ಆನ್ ಮಾಡಿದರೆ ಸಾರ್ವಜನಿಕರಿಗೆ ಉಪಯೋಗವಾಗುತ್ತದೆ ಎಂದು ತಿಳಿಸಿದರು. ಈ ಸಂಬಂದ ವಾರ್ಡ್ ಅಭಿಯಂತರರು ಮಾತನಾಡಿ ಬೆಸ್ಕಾಂ ರವರು ಈ ಕೋಳವೆ ಬಾವಿಗೆ RR No ನೀಡದಿರುವ ಕಾರಣ ಪಂಪು ಮೋಟಾರ್ ಆನ್ ಮಾಡಲು ಸಾಧ್ಯವಾಗಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.
- **ಹೆಗಡೆನಗರದ ಸಾರ್ವಜನಿಕರು ಮಾತನಾಡಿ ಹೆಗಡೆನಗರದಲ್ಲಿ ಕುಡಿಯುವ** ನೀರಿನ ಸಮಸ್ಯೆವಿದ್ದು, ಈ ಬಗ್ಗೆ ಪರಿಶೀಲಿಸಲು ಕೋರಿದರು. ಸ.ಕಾ.ಅ ರವರು ಮಾತನಾಡಿ ಹೆಗಡೆನಗರದ ಪಶ್ಚಿಮ ಭಾಗದಲ್ಲಿ

ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಈಗಾಗಲೇ ಗಮನಕ್ಕೆ ಬಂದಿದ್ದು, ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆ ವತಿಯಿಂದ ಕಾವೇರಿ ಕುಡಿಯುವ ನೀರಿನ ಮತ್ತು ಒಳಚರಂಡಿ ಕೊಳವೆಗಳನ್ನು ಅಳವಡಿಸುವ ಸಮಯದಲ್ಲಿ ಬಹಳಷ್ಟು ಪೈಪುಗಳು ಹಾಳಾಗಿದ್ದು, ಹಾಳಾದ ಪೈಪುಗಳನ್ನು ಬದಲಾಯಿಸಲು ಕ್ರಮವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

- **ಸುರೇಶ್ ಥಣಿಸಂದ್ರ** ರವರು ಮಾತನಾಡಿ ನೂರ್ ಮಸೀದಿ ಹತ್ತಿರ 3ನೇ ಮತ್ತು 4ನೇ ಅಡ್ಡರಸ್ತೆಯಲ್ಲಿ ಒಂದು ಕೊಳವೆಬಾವಿಯಿದ್ದು ಈ ಕೊಳವೆಬಾವಿಗೆ ಪಂಪು ಮೋಟಾರನ್ನು ಅಳವಡಿಸಿದ್ದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಅನುಕೂಲವಾಗುತ್ತದೆ ಎಂದು ತಿಳಿಸಿದರು.

## 5. ವಾರ್ಡ್ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ :

- **ಶಕೀಲ್** ರವರು ಮಾತನಾಡಿ ಥಣಿಸಂದ್ರ ವೃತ್ತದ ಬಳಿ ದೊಡ್ಡ ಗುಂಡಿ ಬಿದ್ದಿತ್ತು, ಅದರ ತುಂಬ ನೀರು ನಿಂತಿದ್ದರಿಂದ ವಾಹನಗಳು ಓಡಾಡಲು ಬಹಳ ಕಷ್ಟವಾಗುತ್ತಿತ್ತು ಎಂದು ತಿಳಿಸಿದಾಗ ಸ.ಅ ಮಾತನಾಡಿ ಥಣಿಸಂದ್ರ ವೃತ್ತದ ಹತ್ತಿರ ಓಗಾಗಲೇ ಬಿ.ಬಿ.ಎಂ.ಪಿ ವತಿಯಿಂದ ವೆಟ್‌ಮಿಕ್ಸ್ ಹಾಕಿ ರಸ್ತೆಯಲ್ಲಿ ನೀರು ನಿಲ್ಲದಂತೆ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.
- **ಅಝುರ್ ಭರತ್‌ನಗರ** ರವರು ಅಬೂಬಕರ್ ಮಸೀದಿಯಲ್ಲಿ ಹಾಗೂ ಅಕ್ಕ ಪಕ್ಕದ ರಸ್ತೆಗಳಲ್ಲಿ ಡಾಂಬರೀಕರಣ ಏಕೆ ಮಾಡಿಲ್ಲವೆಂದು ಪ್ರಶ್ನಿಸಿದರು, ಈ ಬಗ್ಗೆ ಸಹಾಯಕ ಅಭಿಯಂತರರು ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಪಿ. ಐಂಡ್ ಟಿ ಬಡಾವಣೆ, ಥಣಿಸಂದ್ರ ಶಾಲೆ ಬಲ ಭಾಗದ ಅಂಜನಾದ್ರಿ ಬಡಾವಣೆ ಅಡ್ಡ ರಸ್ತೆಗಳು, ಥಣಿಸಂದ್ರ ಶಾಲೆ ಹೊಂಭಾಗದ ರಸ್ತೆಗಳು, ಅಲಿ ಮಸೀದಿ ರಸ್ತೆಗೆ ಹೊಂದಿಕೊಂಡಿರುವ ಅಡ್ಡ ರಸ್ತೆಗಳು, ಅಮರಜ್ಯೋತಿ ಬಡಾವಣೆ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಅಡ್ಡ ರಸ್ತೆಗಳು, ಕಾಳಿಕಾಂಬ ದೇವಸ್ತಾನದ ರಸ್ತೆ, ಅಬುಬಕರ್ ಮಸೀದಿ ರಸ್ತೆ ಹಾಗೂ ಬಲೂನ ಫ್ಯಾಕ್ಟರಿ ರಸ್ತೆ ಇತ್ಯಾದಿ ರಸ್ತೆಗಳಲ್ಲಿ ಕಾವೇರಿ ಕುಡಿಯುವ ನೀರಿನ ಟೆಸ್ಟಿಂಗ್ ಕಾರ್ಯವು ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ ಈ ರಸ್ತೆಗಳಲ್ಲಿ ಡಾಂಬರೀಕರಣ ಮಾಡಲು ಸಾಧ್ಯವಾಗಿರುವುದಿಲ್ಲ ಎಂದು ಹಾಗೂ ಸಾರ್ವಜನಕರಿಂದ ಪ್ರತಿದಿನ ಬಹಳಷ್ಟು ದೂರುಗಳು ಬರುತ್ತಿರುವುದಾಗಿ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ಮೇಲೆ ವಿವರಿಸಿರುವ ಪ್ರದೇಶಗಳಲ್ಲಿ ಕಾವೇರಿ ಕುಡಿಯುವ ನೀರಿನ ಟೆಸ್ಟಿಂಗ್ ಯಾವಾಗ ಪೂರ್ಣಗೊಳಿಸಿ ಬಿ.ಬಿ.ಎಂ.ಪಿ ಗೆ ಕ್ಲಿಯರನ್ಸ್ ನೀಡಲಾಗುವುದೆಂಬ ಬಗ್ಗೆ ಟೈಮ್‌ಲೈನ್‌ಥೊಂದಿಗೆ ಮುಂದಿನ ಸಭೆಗೆ ಲಿಖಿತ ರೂಪದಲ್ಲಿ ಮಾಹಿತಿಯನ್ನು ನೀಡಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ ಸೂಚಿಸಿದರು.
- ಸಾರ್ವಜಿಕರು ಮಾತನಾಡಿ ಭರತ್‌ನಗರ ಹಾಗೂ ಇತರ ಪ್ರದೇಶಗಳಲ್ಲಿ ಸಾರ್ವಜನಿಕರು ಅಕ್ರಮವಾಗಿ ಸ್ಯಾನಿಟರಿ ಸಂಪರ್ಕವನ್ನು ಪಡೆಯುತ್ತಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಯಾರಿಗೂ ಅಕ್ರಮವಾಗಿ ಸಾನಿಟರಿ ಕನೆಕ್ಷನ್ ಕೊಡಬಾರದೆಂದು ಕೋರಿದರು.
- **ದಾಸಪ್ಪ** ರವರು ಮಾತನಾಡಿ ಶಬರಿನಗರ ಮುಖ್ಯ ರಸ್ತೆಯಲ್ಲಿ ಡಾಂಬರೀಕರಣ ಮಾಡಲಾಗಿದ್ದು, ಇ ರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳು ಮುಚ್ಚಿಹೊಗಿದ್ದು, ಮ್ಯಾನ್‌ಹೋಲ್‌ಗಳು ಕಾಣುವಂತೆ ಅವಶ್ಯ ಕ್ರಮ ವಹಿಸಲು ಕೋರಿದರು ಹಾಗೂ ಇಂದಿರಿ ಕ್ಯಾಂಟಿನ್ ರಸ್ತೆಯಲ್ಲಿ ಡ್ರೇನ್ ಬ್ಲಾಕ್‌ಯಾಗಿದ್ದು, ಇದನ್ನು ಕೂಡಲೇ ಸರಿಪಡಿಸಲು ಕೋರಿದರು.
- **2ನೇ ಅಡ್ಡರಸ್ತೆ, ಅಲಿ ಮಸೀದಿ** ಹತ್ತಿರ ಚರಂಡಿ ಬ್ಲಾಕ್ ಆಗಿದೆ ಎಂದು ಸಾರ್ವಜನಿಕರು ತಿಳಿಸಿದರು. ಕೂಡಲೇ ಬ್ಲಾಕ್‌ಯಾಗಿರುವ ಚರಂಡಿ ಸರಿಪಡಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು.
- **ದಸಪ್ಪ** ರವರು ಮಾತನಾಡಿ ಶಬರಿ ನಗರ 8 ನೇ ಅಡ್ಡರಸ್ತೆಯು ಕೂಡಲೆ ಡಾಂಬರೀಕರಣ ಮಾಡಲು ಹಾಗು 9 ನೇ ಅಡ್ಡರಸ್ತೆ ಇಂದಿರಾ ಕಾಂಟೀನ್ ಬಳಿ ಇರುವ ರಸ್ತೆಯ ಚರಂಡಿ ಬ್ಲಾಕ್ ಆಗಿದ್ದು ಅದನ್ನು ಕೂಡಲೆ ಶುದ್ಧಪಡಿಸಿ ಎಂದು ಕೋರಿದರು.
- **2 ನೇ ಕ್ರಾಸ್ ಟಿಪ್ಪು** ಮಸೀದಿ ಬಳಿ ಇರುವ ಚರಂಡಿ ಸರಿಯಾಗಿಲ್ಲ ಅಲ್ಲಿ ಹೊಸದಾದ ಚರಂಡಿ ಮಾಡಲು ಸಾರ್ವಜನಿಕರು ಕೋರಿದರು.

6. <u>ವಿದ್ಯುತ್ ದೀಪಗಳ ನಿರ್ವಹಣೆ ಬಗ್ಗೆ</u>

- **ಶಕೀಲ್** ರವರು ಮಾತನಾಡಿ ಸಾದಿಕ್ ಲೇಔಟ್ ಬಳಿ ಬೀದಿ ದೀಪದ ಮೇಲಿರುವ ವಿದ್ಯುತ್ ತಂತಿಗಳು ಸಾರ್ವಜನಿಕರಿಗೆ ಅನಾನುಕೂಲತೆವಾಗುತ್ತಿದೆ ಎಂದು ತಿಳಿಸಿದರು.
- **ರಾಜೆಂದ್ರ ನಾಯಕ್** ರವರು ಮಾತನಾಡಿ 3 ನೇ ಅಡ್ಡರಸ್ತೆ, ಟಿಪ್ಪು ಮಸೀದಿ ಬಳಿ ಬೀದಿ ದೀಪಗಳು ಇಲ್ಲದಿರುವ ಕಾರಣ ಸಾರ್ವಜನಿಕರಿಗೆ ರಾತ್ರಿಹೊತ್ತಿನಲ್ಲಿ ಓಡಾಡಲು ಕಷ್ಟವಾಗಿದ್ದು ಕೂಡಲೆ ಬೀದಿ ದೀಪ ಹಾಕಲು ಮನವಿ ಮಾಡಿದರು.
- ಸಾರ್ವಜನಿಕರು ಮಾಯನಾಡಿ **ಅಲಿ ಮಸೀದಿ** ರಸ್ತೆ ಮತ್ತು ಅಕ್ಕ ಪಕ್ಕದ ರಸ್ತೆಯಲ್ಲಿ ವಿದ್ಯುತ್ ಏರಿಳಿತಗಳು (Fluctuation) ಆಗುತ್ತಿದ್ದು ಇದರಿಂದ ಸಾರ್ವಜನಿಕರು ಬಹಳ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಈ ಬಗ್ಗೆ ಬೇಸ್ಕಾಂ ಅಧಿಕಾರಿಗಳು ರವರು ಪರೀಶಿಲಿಸಿ ಕ್ರಮವಹಿಸಲು ನೋಡಲ್ ಅಧಿಕಾರಿಗಳು ತಿಳಿಸಿದರು.

7. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.</u>

- **ಶ್ರೀನಿವಾಸ್‌ರಾವ್ ಅಮರಜ್ಯೋತಿ ನಗರ ರವರು ಮಾತನಾಡಿ** ಥಣಿಸಂದ್ರ ಮುಖ್ಯ ರಸ್ತೆಯಲ್ಲಿ Reliance ಮುಂಬಾಗ ಈ ಹಿಂದೆ ಅಂಬೇಡ್ಕರ್ ಆಟದ ಮೈದಾನಕ್ಕಾಗಿ ಜಾಗವನ್ನು ಕಾಯ್ದಿರಿಸಲಾಗಿದ್ದು. ಈ ಜಾಗದಲ್ಲಿ ಈ ಹಿಂದೆ ಅಳವಡಿಸಿರುವ **ಅಂಬೇಡ್ಕರ್ ಆಟದ ಮೈದಾನವೆಂದು** ಬೋರ್ಡ್ ಯಾರೋ ತೆಗೆದು ಹಾಕಿರುತ್ತಾರೆ ಎಂದು ತಿಳಿಸಿದರು ಹಾಗೂ ಈ ಹಿಂದೆ ತಾಹಸಿಲ್ದಾರ್‌ರವರಿಗೆ ಬಿಬಿಎಂಪಿಯಿಂದ ಪತ್ರ ಬರೆದು ಸರ್ವೆ ಮಾಡಿ ಈ ಜಾಗವನ್ನು ಬಿಬಿಎಂಪಿಗೆ ಹಸ್ತಾಂತರಿಸಲು ಕೋರಲಾಗಿದ್ದು. ಆದರೆ ಯಾವುದೆ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ತಹಸಿಲ್ದಾರ್‌ರವರಿಗೆ ಮತ್ತೊಮ್ಮೆ ಪತ್ರ ಬರೆಯಬೇಕಾಗಿ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ತಹಸಿಲ್ದಾರ್‌ರವರಿಗೆ ಮತ್ತೊಮ್ಮೆ ಪತ್ರ ಬರೆದು ಕೂಡಲೇ ಸರ್ವೇ ಕಾರ್ಯ ಕೈಗೊಳ್ಳಲು ಕೊರಲಾಗುವುದೆಂದು ತಿಳಿಸಿದರು.

- **ಶ್ರೀ ದಾಸಪ್ಪ ಹೆಗಡೆನಗರ ರವರು ಮಾತನಾಡಿ** ವಾರ್ಡ್ ವ್ಯಾಪ್ತಿಯಲ್ಲಿ ಮತಗಟ್ಟೆಗಳು (Voting Booth) ಸರಿಯಾಗಿ ವಿಂಗಡಿಸಿರುವುದಿಲ್ಲ ಎಂದು ತಿಳಿಸಿದರು. ಮತದಾರರ ಪಟ್ಟಿಯಲ್ಲಿ ಒಂದೇ ಮನೆಯಲ್ಲಿ ಮತದಾರರ ಹೆಸರು ಬೇರೆ ಬೇರೆ ಬೂತ್‌ಗಳಲ್ಲಿ ಇರುವುದರಿಂದ ಬಿ.ಎಲ್.ಓ. ಗಳು ಈ ಬಗ್ಗೆ ಪರೀಶಿಲಿಸ ಕ್ರಮ ವಹಿಸಬೇಕಾಗಿ ಕೋರಿದರು.

- **ಸಾರ್ವಜನಿಕರು ಮಾತನಾಡಿ ಹೆಗಡೆನಗರದ** ಬಸ್ ಸ್ಟಾಪ್ ಬಳಿ ಒಂದು ಸಾರ್ವಜನಿಕ ಶೌಚಾಲಯ ಮಾಡುವಂತೆ ಕೋರಿದರು. ಈ ಬಗ್ಗೆ ಸ.ಅ ರವರು ಮಾತನಾಡಿ ನಾರಾಯಣಪುರ ಕ್ರಾಸ್ ಹತ್ತಿರ ನಿರ್ಮಿಸಿರುವ ಮೇಲ್ಸೇತುವೆ ಕೆಳಗೆ ಸಾರ್ವಜನಿಕ ಶೌಚಾಲಯ ನಿರ್ಮಿಸಲು ಮುಖ್ಯ ಅಭಿಯಂತರರು ಮೂಲಭೂತ್ ಸೌಕರ್ಯ ವಿಭಾಗ ರವರಿಗೆ ಅನುಮತಿ ಕೋರಲಾಗಿದ್ದು, ಇಲ್ಲಿಯವರೆಗೂ ಸದರಿಯವರಿಂದ ಅನುಮತಿ ಬಂದಿರುವುದಿಲ್ಲವೆಂದು ತಿಳಿಸಿದರು.

- **ಸಾರ್ವಜನಿಕರು ಮಾತನಾಡಿ ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಪೂರ್ವಂಕರ್** ಅಪಾರ್ಟ್‌ಮೆಂಟ್ ಬಳಿ ಇರುವ ಮೇಲ್ಸೇತುವೆ ರ್‍ಯಾಂಪ್ ಹತ್ತಿರ ಮಳೆ ನೀರು ನಿಲ್ಲುತ್ತಿದ್ದು ಸಾರ್ವಜನಿಕರಿಗೆ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿ ಬಹಳಷ್ಟು ಕಡೆ ಸೊಳ್ಳೆಯ ಸಮಸ್ಯೆ ಹೆಚ್ಚಾಗುತ್ತಿದೆ ಅದನ್ನು ಸರಿಪಡಿಸಲು Spraying ಮಾಡುವುದು ಅವಶ್ಯಕವಾಗಿದೆ ಎಂದು ಸಾರ್ವಜನಿಕರು ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಹಿರಿಯ ಆರೋಗ್ಯ ಪರಿವೀಕ್ಷಕರು, ಕೂಡಲೇ ಅವಶ್ಯಕವಿರುವ ಪ್ರದೇಶಗಳಲ್ಲಿ Spraying ಮಾಡಲು ಕ್ರಮ ವಹಿಸಬೇಕಾಗಿ ಸೂಚಿಸಿದರು ಹಾಗೂ ಮುಂದಿನ ಸಭೆಗೆ Spraying ಯಾವ ಯಾವ ಪ್ರದೇಶಗಳಲ್ಲಿ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ನೀಡಲು ಸೂಚಿಸಿದರು.

- **ಥಣಿಸಂದ್ರ ಮುಖ್ಯ ರಸ್ತೆಯಲ್ಲಿ** SBI Bank ಹತ್ತಿರ ದೊಡ್ಡ ಗುಂಡಿ ಇದೆ ಅದನ್ನು ಕೂಡಲೆ ಪ್ಯಾಚ್ ಮಾಡಿ ಎಂದು ಸಾರ್ವಜನಿಕರು ಕೋರಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ಸಮಿತಿರವರು ಮಾತನಾಡಿ ಈವರೆಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲುಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

03.09.2022

**ಕಾರ್ಯದರ್ಶಿ**
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 07, (ಥಣಿಸಂದ್ರ)

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್ ನಂ. 07(ಥಣಿಸಂದ್ರ)
ಹಾಗೂ ಸ.ಕಾ.ಅ ಬ್ಯಾಟರಾಯನಪುರ ಉಪ ವಿಭಾಗ
ಬಿಬಿಎಂಪಿ, ಬೆಂಗಳೂರು

**ಪ್ರತಿಯನ್ನು.**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಿಸಿದೆ
6. ಕಛೇರಿಕಡತಕ್ಕೆ.